ಕಾನೂನಿನ ನಡಿಗೆ ಮಹಿಳೆಯರ ಕಡೆಗೆ
DEEDS Since 1982

# DEEDS ಸಂವಾದ

**ಸಮತೆಯ ಸಮಾಜದೆಡೆಗೆ**

ಸಂವಾದ 3

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಮಾತು

ಆತ್ಮೀಯರೇ, ತಮಗೆಲ್ಲರಿಗೂ 2025ನೇ ಹೊಸ ವರುಷ ಸಂತೋಷ, ಸಮೃದ್ಧಿ ಮತ್ತು ಶಾಂತಿಯನ್ನು ತರಲಿ. ನಿಮ್ಮ ಜೀವನ ಸದಾ ಸುಖಮಯವಾಗಿರಲಿ ಎಂದು ಹಾರೈಸುತ್ತೇವೆ. ಕಳೆದ ವರ್ಷ ಎರಡು ಮಹಿಳಾಪರವಾದ ತೀರ್ಪುಗಳು ಬಂದಿವೆ. ಮಕ್ಕಳ ಆರೈಕೆ ಪೂರ್ಣಾವಧಿ ಕೆಲಸ, ಗಂಡ ಹೆಂಡತಿಗೆ ಸಂಬಳ ಕೊಡಬೇಕು ಎಂದು ಕರ್ನಾಟಕ ಹೈಕೋರ್ಟ್ ಹೇಳಿದೆ. ಗೃಹಿಣಿ, ತಾಯಿಯಾಗಿ, ಹೆಂಡತಿಯಾಗಿ ಹಗಲು ರಾತ್ರಿ ಕೆಲಸ ಮಾಡುತ್ತಾಳೆ. ಮಕ್ಕಳನ್ನು ನೋಡಿಕೊಳ್ಳುವುದು ಪೂರ್ಣ ಸಮಯದ ಕೆಲಸ ಎಂದು ನ್ಯಾಯಾಲಯ ಹೇಳಿದೆ. ಇನ್ನೊಂದು ವಿಚ್ಛೇದಿತ ಮುಸ್ಲಿಂ, ಮಹಿಳೆಯರು ಅಪರಾಧ ಪ್ರಕ್ರಿಯೆ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್ 125ರ ಅಡಿಯಲ್ಲಿ ಜೀವನಾಂಶಕ್ಕೆ ಅರ್ಹರು. ಜೀವನಾಂಶ ದಾನವಲ್ಲ, ಇದು ವಿವಾಹಿತ ಮಹಿಳೆಯರ ಹಕ್ಕು ಮತ್ತು ಎಲ್ಲಾ ವಿವಾಹಿತ ಮಹಿಳೆಯರಿಗೆ ಅವರ ಧರ್ಮವನ್ನು ಲೆಕ್ಕಿಸದೆ ಅನ್ವಯಿಸುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ಮಹಿಳಾ ಪ್ರಕರಣ ನಿರ್ವಹಿಸುವಾಗ ನಮಗೆ ಈ ತೀರ್ಪುಗಳು ನೆರವಾಗಲಿದೆ.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಕೇಂದ್ರವು ಶೀ–ಬಾಕ್ಸ್ ಪೋರ್ಟಲ್‌ನ್ನು ಆರಂಭಿಸಿದೆ. ಶೀ ಬಾಕ್ಸ್ ಎನ್ನುವುದು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ದೂರುಗಳನ್ನು ಸಲ್ಲಿಸಲು ಇರುವ ಆನ್‌ಲೈನ್ ವ್ಯವಸ್ಥೆ. ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಲು, ಕೆಲಸದ ಸ್ಥಳಗಳು ಸುರಕ್ಷಿತವೆಂದು ಖಚಿತಪಡಿಸಿಕೊಳ್ಳಲು, ಮಹಿಳೆಯರು ಅಭಿವೃದ್ಧಿ ಹೊಂದಲು ಮತ್ತು ಯಶಸ್ವಿಯಾಗಲು ಸರಕಾರವು ಈ ಪೋರ್ಟಲ್‌ನ್ನು ಆರಂಭಿಸಿದೆ. ಮಹಿಳಾ ಅಧಿಕಾರಿಗಳ ತಂಡ ಈ ದೂರುಗಳ ಕುರಿತು ವಿಚಾರಣೆ ನಡೆಸುತ್ತದೆ. ಮಹಿಳೆಯರಿಗೆ ಸುರಕ್ಷಿತ ವಾತಾವರಣ ಸೃಷ್ಟಿಸುವ ನಿಟ್ಟಿನಲ್ಲಿ ಈ–ಪೋರ್ಟಲ್ ಕಾರ್ಯ ನಿರ್ವಹಿಸುತ್ತದೆ.

ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಂತೆ 2024ರ ಎಪ್ರಿಲ್ ಮತ್ತು ಸಪ್ಟೆಂಬರ್ ನಡುವೆ ರಾಜ್ಯಾದ್ಯಂತ 1624 ಬಾಲ್ಯವಿವಾಹ ಸಂಬಂಧಿತ ದೂರುಗಳು ದಾಖಲಾಗಿವೆ. ಇವುಗಳಲ್ಲಿ 331 ವಿವಾಹಗಳು ನಡೆದಿವೆ. ಆದರೆ 1280 ವಿವಾಹಗಳನ್ನು ತಡೆಯಲಾಗಿದೆ ಮತ್ತು 295 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿವೆ. ಬಾಲ್ಯವಿವಾಹವನ್ನು ತಳಮಟ್ಟದಲ್ಲಿ ತಡೆಯಲು, ಬಾಲ್ಯವಿವಾಹ ಪ್ರಕರಣಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಗ್ರಾಮ ಪಂಚಾಯತಿಗಳಿಗೆ 50,000 ಬಹುಮಾನವನ್ನು ರಾಜ್ಯ ಸರಕಾರ ಘೋಷಿಸಿದೆ. ಅಲ್ಲದೆ, ಸರಕಾರದ ವಿವಿಧ ಇಲಾಖೆಗಳಿಂದ 59,000 ಬಾಲ್ಯವಿವಾಹ ನಿಷೇಧ ಅಧಿಕಾರಿಗಳನ್ನು ನೇಮಿಸಿದೆ. ಈ ಅಧಿಕಾರಿಗಳು ಬಾಲ್ಯವಿವಾಹಗಳನ್ನು ತಡೆಗಟ್ಟಲು ಸರಕಾರಿ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗೆ ಸಹಕರಿಸುತ್ತಾರೆ. ಇವರೊಂದಿಗೆ ನಾವೂ ಕೈಜೋಡಿಸಿ, ನಮ್ಮ ಹಳ್ಳಿಗಳಲ್ಲಿ, ಜಿಲ್ಲೆಗಳಲ್ಲಿ, ರಾಜ್ಯದಲ್ಲಿ ಬಾಲ್ಯವಿವಾಹ ಸಂಪೂರ್ಣವಾಗಿ ತಡೆಗಟ್ಟಲು ಕಾರ್ಯ ನಿರ್ವಹಿಸೋಣ. ನಮ್ಮೆಲ್ಲರ ಬದುಕನ್ನು, ಮುಂದಿನ ನಮ್ಮ ಮಕ್ಕಳ, ಸಮುದಾಯದ ಬದುಕು ಸಂತೋಷದಿಂದಿರಲು ಸಾಧ್ಯವಿರುವ ಈ ಚಟುವಟಿಕೆಗಳಿಗೆ ನಿಮ್ಮೆಲ್ಲರ ಉತ್ಸಾಹದ ಭಾಗವಹಿಸುವಿಕೆ, ಪ್ರೋತ್ಸಾಹ, ಸಹಭಾಗಿತ್ವವನ್ನು ಡೀಡ್ಸ್ ಬಯಸುತ್ತದೆ.

**ಮರ್ಲಿನ್ ಮಾರ್ಟಿಸ್**

## ವಿಚಾರ ಸಂಕಿರಣ

ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್) ಮತ್ತು ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಛಯ ಸಹಭಾಗಿತ್ವದಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರು : ಪಾತ್ರ–ಸವಾಲುಗಳು ಮತ್ತು ಮಹಿಳಾ ನ್ಯಾಯ ವಿಚಾರ ಸಂಕಿರಣವು ಧಾರವಾಡದಲ್ಲಿ ಅಕ್ಟೋಬರ್ 15 2024ರಂದು ನಡೆಯಿತು. ನವನಗರದ ಕಾನೂನು ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿ ಪ್ರೊ. ಡಾ. ಸಿ. ಬಸವರಾಜ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಸಮಾಜದಲ್ಲಿ ಅನೇಕ ಸಂಘ ಸಂಸ್ಥೆಗಳಿವೆ, ಆದರೆ ಮಹಿಳಾ ರಕ್ಷಣೆಗೆ ಮಾತ್ರ ಇರುವ ಸಂಸ್ಥೆಗಳು ವಿರಳ. ನಿರಂತರವಾಗಿ ಮಹಿಳಾ ಕಲ್ಯಾಣಕ್ಕಾಗಿ, ರಕ್ಷಣೆ, ಮಹಿಳಾ ಹಕ್ಕುಗಳಿಗಾಗಿ ಡೀಡ್ಸ್ ಸಂಸ್ಥೆ ಅತ್ಯುತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಇನ್ನು ಭಾರತ ಸಂವಿಧಾನ ಮಹಿಳೆಯರಿಗೆ ರಕ್ಷಣಾ ಕವಚ ಇದ್ದ ಹಾಗೆ. ಮಹಿಳೆಯರಿಗೆ ಎದುರಾಗುವ ಸಮಸ್ಯೆಗಳನ್ನು ನಿಯಂತ್ರಣ ಮಾಡುವ ಶಕ್ತಿ ಸಂವಿಧಾನಕ್ಕೆ ಇದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಪರಶುರಾಮ ದೊಡ್ಡಮನಿ ಮಾತನಾಡಿ ದೇಶದಲ್ಲಿ 11.13 ಲಕ್ಷ ಮಕ್ಕಳು, ಮಹಿಳೆಯರು ನಾಪತ್ತೆಯಾಗಿದ್ದಾರೆ. ಈ ಮಾಹಿತಿಯನ್ನು ಸ್ವತಃ ಕೇಂದ್ರ ಸರ್ಕಾರವೇ ನೀಡಿದೆ. ಇದು ಆತಂಕಕಾರಿ




ವಿಷಯವಾಗಿದೆ. ಅಷ್ಟೇ ಅಲ್ಲದೆ ಭ್ರೂಣ ಹತ್ಯೆ ಪ್ರಕರಣಗಳು ಹೆಚ್ಚಾಗಿವೆ. ಜನರು ಮೌಢ್ಯತೆಯಿಂದ ಹೊರಗಡೆ ಬರಬೇಕು. ಎಲ್ಲರೊಂದಿಗೆ ಪ್ರೀತಿ ವಿಶ್ವಾಸದಿಂದ ಇರಬೇಕು ಎಂದರು.

ಕಾನೂನು ಸೇವಾ ಪ್ರಾಧಿಕಾರದಿಂದ ಎಲ್ಲರಿಗೂ ನ್ಯಾಯ ಒದಗಿಸಬೇಕೆಂಬ ಉದ್ದೇಶದಿಂದ ಕಾರ್ಯ ನಿರ್ವಹಿಸುತ್ತಿದೆ. ಇದರ

ಸದುಪಯೋಗವನ್ನು ಎಲ್ಲರೂ ಬಳಸಿಕೊಂಡು ಸುಖಮಯ ಜೀವನ ನಡೆಸಬೇಕೆಂದರು.

ಶ್ರೀಮತಿ ಮರ್ಲಿನ್ ಮಾರ್ಟಿಸ್ ಡೀಡ್ಸ್ ಸಂಸ್ಥೆ ಮಂಗಳೂರು ಪ್ರಾಸ್ತಾವಿಕ ಮಾತನಾಡಿದರು. ಸುಮಾರು 40 ಮಂದಿ ಅರೆಕಾಲಿಕ ಕಾನೂನು ಸುಗಮಕಾರರು ಧಾರವಾಡ ಬಳ್ಳಾರಿ, ಉತ್ತರಕನ್ನಡ, ದಕ್ಷಿಣ ಕನ್ನಡ, ಗದಗ, ಬಾಗಲಕೋಟೆ, ಹಾವೇರಿ, ರಾಯಚೂರು, ಕಲ್ಬುರ್ಗಿ, ವಿಜಯಪುರ, ಬೆಳಗಾವಿ ಜಿಲ್ಲೆಗಳಿಂದ ಆಗಮಿಸಿದ್ದರು. ಅವರ ಜಿಲ್ಲೆಗಳಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳು ಮತ್ತು ಎದುರಿಸುವ ಸವಾಗಲುಗಳ ಕುರಿತು ಚರ್ಚಿಸಲಾಯಿತು. ಅಕ್ಟೋಬರ್ 29, 2024ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಸದಸ್ಯ ಕಾರ್ಯದರ್ಶಿಯವರನ್ನು ಭೇಟಿ ಮಾಡಿ, ಅರೆಕಾಲಿಕ ಸ್ವಯಂ ಸೇವಕರು ಎದುರಿಸಿದ ಸವಾಲು-ಸಲಹೆಗಳ ಪಟ್ಟಿಯನ್ನು ಸಲ್ಲಿಸಲಾಯಿತು.

## ನ್ಯಾಯ ವ್ಯವಸ್ಥೆಯ ಪ್ರತಿನಿಧಿಗಳೊಂದಿಗೆ ಸಮಾಲೋಚನಾ ಕಾರ್ಯಕ್ರಮಗಳು

ತಳಮಟ್ಟದಲ್ಲಿ ಲಿಂಗತ್ವ, ಕಾನೂನು ಮಾಹಿತಿ ಪಡೆದ ಮಹಿಳೆಯರು ತಮ್ಮ ಹಕ್ಕನ್ನು ಪಡೆಯಲು ಮತ್ತು ತಮಗಾದ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಸರಕಾರದ ನ್ಯಾಯ ವ್ಯವಸ್ಥೆಯು ಅದಕ್ಕೆ ಪೂರಕವಾಗಿರಬೇಕು. ಆ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಲಿಂಗಸೂಕ್ಷ್ಮತೆಯನ್ನು ಹೊಂದಲು ಮತ್ತು ದೌರ್ಜನ್ಯಗೊಳಗಾದ ಮಹಿಳೆಯರ ಪ್ರಕರಣವನ್ನು



ಶೀಘ್ರವಾಗಿ ಇತ್ಯರ್ಥಗೊಳಿಸಿ ಅವರಿಗೆ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದ ಪ್ರತೀ ಆರು ಜಿಲ್ಲೆಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ಮಹಿಳೆಯರಿಗಿರುವ ನ್ಯಾಯ ವ್ಯವಸ್ಥೆಗಳು-ಸಮಾಲೋಚನಾ ಸಭೆಗಳನ್ನು ಆಯೋಜಿಸಲಾಗಿದೆ. ಡೆವಲಪ್‌ಮೆಂಟ್ ಎಜ್ಯುಕೇಶನ್ ಸರ್ವಿಸ್ (ಡೀಡ್ಸ್), ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರು ಜಿಲ್ಲೆಗಳ ಪೂರಕ ಕಾನೂನು ಸುಗಮಕಾರರ ಸಮುಚ್ಚಯ ಇವರ ಸಹಭಾಗಿತ್ವದಲ್ಲಿ ನಡೆಯಿತು.

ಮಾರನೇ ಹಂತದ ಸಮಾಲೋಚನಾ ಸಭೆಯಲ್ಲಿ ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆ ಮತ್ತು ನಾಲ್ಕನೇ ಹಂತದ ಸಭೆಗಳಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳ ತಡೆ ಕಾಯ್ದೆ ಬಗ್ಗೆ ಚಟುವಟಿಕೆಗಳ ಮೂಲಕ ಮಾಹಿತಿ ನೀಡಲಾಯಿತು. ಭಾಗಾರ್ಥಿಗಳ ಪ್ರಶ್ನೆಗಳನ್ನು ಉತ್ತರಿಸುವುದರೊಂದಿಗೆ ವಿಷಯವನ್ನು ಮನದಟ್ಟು ಮಾಡಲಾಯಿತು. ಇಲಾಖೆಯಿಂದ ಆಗಮಿಸಿದ ಪ್ರತಿನಿಧಿಗಳು ತಮ್ಮ ತಮ್ಮ ಇಲಾಖೆಗಳ ಸೌಲಭ್ಯ ಸವಲತ್ತುಗಳನ್ನು ವಿವರಿಸಿದರು. ಈ ಸಮಾಲೋಚನಾ ಸಭೆಯಿಂದ, ಇಲಾಖೆಗಳಿಂದ ಭಾಗವಹಿಸುವ ಪ್ರತಿನಿಧಿಗಳಿಗೆ ಕಾನೂನಿನ ಮಾಹಿತಿ, ಇಲಾಖೆಗಳ ಪರಿಚಯ ಮತ್ತು ಇಲಾಖೆಗಳ ಸೇವೆಗಳ ಬಗ್ಗೆ ಮನವರಿಕೆಯಾಗುತ್ತಿದೆ. ಇದರಿಂದ ಹಿಂಸೆಯಿಂದ ಬಳಲುತ್ತಿರುವ ಮಹಿಳೆಗೆ ನ್ಯಾಯ ಒದಗಿಸಲು ಸಹಕಾರಿಯಾಗುತ್ತದೆ. ಆರು ಜಿಲ್ಲೆಗಳಲ್ಲಿ ಸುಮಾರು 397 ಪ್ರತಿನಿಧಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ, ಮಾನಸಿಕ ಆರೋಗ್ಯ ಮತ್ತು ನರ ಸಂಸ್ಥೆ, ಸಖಿ, ಸಾಂತ್ವನ, ಮಹಿಳಾ ಪೋಲಿಸ್ ಠಾಣೆ, ಆಶಾ, ಅಂಗನವಾಡಿ ಕಾರ್ಯಕರ್ತರು ಹಾಗೂ ಸ್ವಯಂ ಸೇವಾ ಸಂಸ್ಥೆಯಿಂದ ಭಾಗವಹಿಸಿರುತ್ತಾರೆ. ಭಾಗವಹಿಸಿದ ಪ್ರತಿನಿಧಿಗಳು ಲಿಂಗಸೂಕ್ಷ್ಮತೆ ಬೆಳೆಸಿಕೊಂಡಿದ್ದಾರೆ. ಲಿಂಗತ್ವ, ಕೌಟುಂಬಿಕ ದೌರ್ಜನ್ಯ, ಪೋಕ್ಸೊ ಕಾಯ್ದೆಗಳನ್ನು ತಿಳಿದುಕೊಂಡು ಮಹಿಳೆಯರಿಗೆ ನ್ಯಾಯ ಒದಗಿಸುವಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಜಿಲ್ಲಾ ಮಟ್ಟದ ಪೂರಕ ಕಾನೂನು ಸುಗಮಕಾರರ ತರಬೇತಿ

ಮಹಿಳೆಯರಿಗೆ ಕಾನೂನಿನ ಅರಿವಿನ ಕೊರತೆಯಿಂದ ತಮಗಾದ ಅನ್ಯಾಯದ ವಿರುದ್ಧ ಹೋರಾಡಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಡೀಡ್ಸ್ ಕಾರ್ಯನಿರ್ವಹಿಸುವ ಜಿಲ್ಲೆಗಳಲ್ಲಿ 2ನೆಯ ಹಂತದ ಮಹಿಳಾ ಕಾನೂನುಗಳ ಬಗೆಗಿನ 3 ದಿನಗಳ ತರಬೇತಿಯು ಉತ್ತರ ಕನ್ನಡ, ಗದಗ, ಧಾರವಾಡ, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳಲ್ಲಿ ನಡೆಯಿತು. 97 ಮಂದಿ ಸುಗಮಕಾರರು ಭಾಗವಹಿಸಿದ್ದರು. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಪೋಕ್ಸೊ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಮಾನಸಿಕ ಆರೋಗ್ಯ ಕಾಯ್ದೆ, ತಳ ಮಟ್ಟದ ಮಾಹಿತಿ ಕಾರ್ಯಕ್ರಮ ಯೋಜನೆಗೆ ಸಂಬಂಧಿಸಿದ ವಿಷಯಗಳ ಮಾಹಿತಿ ನೀಡಲಾಯಿತು. ಜಿಲ್ಲಾ ಮಾನಸಿಕ ಆರೋಗ್ಯ ಇಲಾಖೆಯಿಂದ ಡಾ. ಸೋಮಶೇಖರ, ಡಾ. ವಿಜಯರಾಜ್, ಅಶೋಕ್ ಕೋರಿ, ಡಾ. ರೋಹನ್ ಮತ್ತು ಪಶುಪತಿ ಮಾನಸಿಕ ಆರೋಗ್ಯ ಕಾರ್ಯಕ್ರಮಗಳ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಸುಗಮಕಾರರಿಗೆ ಮಾನಸಿಕ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು.

ಹೊಸ ಸುಗಮಕಾರರ 2 ದಿನಗಳ ತರಬೇತಿಯು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಲಿಂಗತ್ವ ಮತ್ತು ಮಹಿಳಾ ಕಾನೂನುಗಳ ವಿಷಯಕ್ಕೆ ಸಂಬಂಧಿಸಿ ನಡೆಯಿತು. ಎರಡು ಜಿಲ್ಲೆಯ ಇಪ್ಪತ್ತನಾಲ್ಕು ಮಂದಿ ತರಬೇತಿ ಪಡೆದು ಕಾನೂನು ಸುಗಮಕಾರರಾದರು.



ಮಹಿಳಾ ಕಾನೂನನ್ನು ಬಹಳ ಸರಳವಾಗಿ ತರಬೇತಿಯಲ್ಲಿ ತಿಳಿಸಿಕೊಟ್ಟರು. ಇದರಿಂದ ಕಾನೂನಿನ ಬಗ್ಗೆ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು ನಾವು ಕಾನೂನು ಸುಗಮಕಾರರಾಗಲೂ ಸಾಧ್ಯವಾಗುತ್ತದೆ. ನಮ್ಮ ಹಳ್ಳಿಗಳಲ್ಲಿರುವ ಮಹಿಳೆಯರಿಗೆ, ಪುರುಷರಿಗೆ, ಮಕ್ಕಳಿಗೆ ಅರಿವಿನ ಕಾರ್ಯಕ್ರಮದ ಮೂಲಕ ನಾವು ಪಡೆದ ಮಾಹಿತಿಯನ್ನು ಹಂಚಿಕೊಳ್ಳುತ್ತೇವೆ. ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗೆ ಸಖಿ, ಸಾಂತ್ವನ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನ್ಯಾಯವನ್ನು ಕೊಡಿಸುವಲ್ಲಿ ಹೋರಾಡುತ್ತೇವೆ ಎಂದು ಸುಗಮಕಾರರು ತಮ್ಮ ಅನುಭವ ಹಂಚಿಕೆಯಲ್ಲಿ ಹೇಳಿದರು.

## ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು

ಮಹಿಳಾ ಕಾನೂನುಗಳ ತರಬೇತಿ ಪಡೆದ ಸುಗಮಕಾರರು ಅವರ ಜಿಲ್ಲೆಗಳಲ್ಲಿ ಮಾಹಿತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು 5 ಜಿಲ್ಲೆಗಳಲ್ಲಿ 118 ಮಾಹಿತಿ ಕಾರ್ಯಕ್ರಮಗಳು ನಡೆದಿದ್ದು, 1798 ಹದಿಹರೆಯದವರಿಗೆ ಮತ್ತು 1670 ಮಹಿಳೆಯರಿಗೆ ಒಟ್ಟು 3468 ಮಂದಿಗೆ ಮಾಹಿತಿ ನೀಡಲಾಗಿದೆ. ಸುಮಾರು 30,000 ಲಿಂಗತ್ವ ಕರಪತ್ರ ಆರು ಜಿಲ್ಲೆಗಳಲ್ಲಿ



ನಡೆದ ತಳಮಟ್ಟದ ಕಾರ್ಯಕ್ರಮದಲ್ಲಿ ಹಂಚಲಾಗಿದೆ. ಇದರಿಂದ ಹೆಣ್ಣು ಗಂಡು ಸಮಾನತೆಯ ಅಗತ್ಯವನ್ನು ತಿಳಿಸಲು ಮತ್ತು ಸಮಾನರಾಗಿ ಕಾಣಲು ಕರಪತ್ರ ನಿರ್ಣಾಯಕ ಪಾತ್ರವಹಿಸಿದೆ.

**ಮಾಹಿತಿ ಕಾರ್ಯಕ್ರಮಗಳ ಮೌಲ್ಯಮಾಪನ :** ಆರು ಜಿಲ್ಲೆಗಳಲ್ಲಿ ಲಿಂಗತ್ವ ಅರಿವಿನ ಕಾರ್ಯಕ್ರಮ ಆಯೋಜನೆ ಮಾಡಿದ 2 ತಿಂಗಳ ನಂತರ ತಳಮಟ್ಟದಲ್ಲಿ ಭಾಗವಹಿಸಿದ ಪುರುಷರ, ಮಹಿಳೆಯರ ಮತ್ತು ಹದಿಹರೆಯದ ಮಕ್ಕಳ ತಿಳುವಳಿಕೆ ಮತ್ತು ಸಿದ್ಧತೆಯ ಮಟ್ಟವನ್ನು ತಿಳಿದುಕೊಳ್ಳಲು ಮೌಲ್ಯಮಾಪನ ಮಾಡಲಾಯಿತು. ಈ ವರದಿಯಲ್ಲಿ ತಿಳಿದುಬಂದದ್ದು ಮೂಲ ಮಾಹಿತಿಯಲ್ಲಿ ಮಹಿಳೆಯರು ಮತ್ತು ಪುರುಷರ ಲಿಂಗತ್ವದ ಅರಿವು 42.82% ಮತ್ತು ಹದಿಹರೆಯದ ಮಕ್ಕಳಲ್ಲಿ 49.78% ಇತ್ತು. ತಳಮಟ್ಟದಲ್ಲಿ ಲಿಂಗತ್ವ ಅರಿವಿನ ಕಾರ್ಯಕ್ರಮದಿಂದ ಅವರ ಆಲೋಚನಾ ವಿಧಾನ ಬದಲಾಯಿತು. ಮಾತ್ರವಲ್ಲ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಸಿದ್ಧರಾಗಿದ್ದಾರೆ. ಸುಮಾರು 56% ಪುರುಷರು, ಮಹಿಳೆಯರು, ಹದಿಹರೆಯದ ಮಕ್ಕಳು ಹೆಣ್ಣು ಗಂಡು ತಾರತಮ್ಯ ಇದೆಯೆಂದು ಒಪ್ಪಿಕೊಂಡಿದ್ದಾರೆ ಮತ್ತು ತಾರತಮ್ಯದ ಕಹಿ ನೆನಪನ್ನು ಹಂಚಿಕೊಂಡಿದ್ದಾರೆ. ಸುಮಾರು 86% ಪುರುಷರು, ಮಹಿಳೆಯರು, ಹದಿಹರೆಯದ ಮಕ್ಕಳು ಹುಡುಗಿಯರಿಗೆ ಸಮಾನ ಶಿಕ್ಷಣ ಮತ್ತು ಸಂಬಳ (ಪಗಾರ)ವನ್ನು ಬೆಂಬಲಿಸಿದ್ದಾರೆ ಮತ್ತು ತನ್ನ ಮನೋಭಾವನೆಯನ್ನು ಬದಲಾಯಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 92%ರಷ್ಟು ಸ್ತ್ರೀಯರಿಗೆ ಶಿಕ್ಷಣ ಮತ್ತು ಉದ್ಯೋಗವನ್ನು ಬೆಂಬಲಿಸಿದ್ದಾರೆ. ಆದರೆ ಬಳ್ಳಾರಿ, ಬಾಗಲಕೋಟೆ, ಗದಗ, ಧಾರವಾಡ ಜಿಲ್ಲೆಗಳಲ್ಲಿ ಸುಮಾರು 49%ರಷ್ಟು ಮಾತ್ರ ಸ್ತ್ರೀಯರಿಗೆ ಅವಕಾಶ ನೀಡುತ್ತಾರೆಯೆಂದು ಒಪ್ಪಿಕೊಂಡಿದ್ದಾರೆ. ಈ ಅಂಕಿ ಅಂಶ ಪುರುಷ ಪ್ರಧಾನ ಮನಸ್ಥಿತಿಯನ್ನು ಬದಲಾಯಿಸುವ ಅಗತ್ಯವನ್ನು ತಿಳಿಸಿದೆ. **ಲಿಂಗತ್ವ ಸಿದ್ಧತೆ–** 46% ವಯಸ್ಕರು ಮತ್ತು 22% ಹದಿಹರೆಯದವರು ತಮ್ಮ ಸುತ್ತಮುತ್ತಲಿನ ಲಿಂಗತ್ವ ತಾರತಮ್ಯ ಅಂದರೆ ಮನೆಯಲ್ಲಿ ಹೆಣ್ಣು ಗಂಡು ತಾರತಮ್ಯವಾದಾಗ, ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ, ಉದ್ಯೋಗಕ್ಕಾಗಿ ಕಳುಹಿಸಲು, ಮಕ್ಕಳು ಅರ್ಧದಲ್ಲಿ ಶಾಲೆ ಬಿಡುವುದು, ಬಾಲ್ಯವಿವಾಹ ನಡೆದಾಗ, ಹೆಣ್ಣು ಮಕ್ಕಳಿಗೆ ಅಗೌರವ ಆದಾಗ, ಹೆಣ್ಣು ಮಕ್ಕಳಿಗೆ ಕಡಿಮೆ ಸಂಬಳ ನೀಡುವಾಗ ಈ ತಾರತಮ್ಯದ ವಿರುದ್ಧ ಧ್ವನಿ ಎತ್ತಿದ್ದಾರೆ.

## ಜಿಲ್ಲಾ/ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಛಯ

ನಾವು ಕಾರ್ಯ ನಿರ್ವಹಿಸುವ ಜಿಲ್ಲೆಗಳಲ್ಲಿ ಜನರಿಗೆ ಕಾನೂನು ಮಾಹಿತಿ ಮತ್ತು ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಲು ಜಿಲ್ಲೆಗಳಲ್ಲಿ ಸಮುಚ್ಛಯದ ಮಾನಸಿಕ ಸಭೆಗಳು ನಡೆಯುತ್ತಿವೆ. ಸಭೆಗಳಲ್ಲಿ ಸುಗಮಕಾರರು ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹ, ಪೋಕ್ಸೊ, ಆಸ್ತಿಯ ಪ್ರಕರಣಗಳ ನಿರ್ವಹಣೆಯ ಬಗ್ಗೆ ಚರ್ಚಿಸಿ ಸಂಬಂಧಪಟ್ಟ ಇಲಾಖೆಗಳ ಮೂಲಕ ಮಹಿಳೆಯರಿಗೆ ನ್ಯಾಯ ಒದಗಿಸಲು ಸಮುಚ್ಛಯದಿಂದ ಸಹಾಯ ಮಾಡುತ್ತಾರೆ. ಕಾನೂನು ತರಬೇತಿ ಜಿಲ್ಲೆಗಳಲ್ಲಿ ಸಮಾಲೋಚನಾ ಕಾರ್ಯಕ್ರಮವನ್ನು ನಡೆಸಲು ಮಾಬೇಕಾದ ಸಿದ್ಧತೆ, ಇಲಾಖೆಗಳ ಆಹ್ವಾನಿಸುವುದು ಮತ್ತು ಜವಾಬ್ದಾರಿ ಹಂಚಿಕೆ ಮಾಡುತ್ತಾರೆ. ಸುಮಗಕಾರರು ಅವರವರ ಪ್ರದೇಶದಲ್ಲಿ ತಳಮಟ್ಟದ ಕಾರ್ಯಕ್ರಮಗಳನ್ನು ಮಾಡಿ ಮುಗಿಸಲು ಚರ್ಚಿಸಿರುತ್ತಾರೆ. ದಕ್ಷಿಣ ಕನ್ನಡ ಸುಗಮಕಾರರು ತಮ್ಮ ತಂಡವನ್ನು ಇನ್ನಷ್ಟು ಗಟ್ಟಿಗೊಳಿಸಲು ಮನೋರಂಜನೆಗಾಗಿ ಒಂದು ದಿನದ ಪ್ರವಾಸವನ್ನು ಕಿಂಗ್ಸ್ ಆಪ್ ಕಿಂಗ್ ಪಿಕ್ನಿಕ್ ಪೊಯಿಂಟ್ ಬ್ರಹ್ಮಾವರ, ಉಡುಪಿಗೆ ಭೇಟಿ ನೀಡಿ ವಿವಿಧ ರೀತಿಯ ಆಟ ಮತ್ತು ನೀರಿನಲ್ಲಿ ಈಜುವುದರೊಂದಿಗೆ ಸಂತೋಷಪಟ್ಟರು.

ಪ್ರತೀ ತಿಂಗಳು ಜಿಲ್ಲಾ ಸಮುಚ್ಛಯ ಸಭೆಗಳ ನಂತರ ರಾಜ್ಯ ಸಮುಚ್ಛಯ ಗೂಗಲ್ ಸಭೆಗಳು ನಡೆಯುತ್ತದೆ. ಈ ಸಭೆಗಳಲ್ಲಿ ಜಿಲ್ಲೆಗಳು ಹಮ್ಮಿಕೊಂಡ ಕೆಲಸ ಕಾರ್ಯಗಳ ಬಗ್ಗೆ ವರದಿಯನ್ನು ಜಿಲ್ಲೆಗಳ ಪ್ರತಿನಿಧಿಗಳು ನೀಡುತ್ತಾರೆ. ಹಮ್ಮಿಕೊಂಡ ಕಾರ್ಯಕ್ರಮಗಳ ಬಗ್ಗೆ ಮೌಲ್ಯಮಾಪನ ಮತ್ತು ಕಾರ್ಯಕ್ರಮಗಳನ್ನು ಉತ್ತಮಪಡಿಸುವ ಅಂಶಗಳ ಬಗ್ಗೆ ಚರ್ಚಿಸುತ್ತಾರೆ. ಮುಂದಿನ ತಿಂಗಳ ಕಾರ್ಯಕ್ರಮದ ಯೋಜನೆಗಳನ್ನು ರೂಪಿಸಲಾಗುತ್ತದೆ. ಇದರೊಂದಿಗೆ ಸುಗಮಕಾರರ ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಕಾರ್ಯಕ್ರಮಗಳ ವರದಿ ಬರೆಯುವ ತರಬೇತಿಯನ್ನು ನೀಡಲಾಗಿದೆ. ಈ ತರಬೇತಿಯಿಂದ ಅನೇಕರು ಅವರ ವರದಿ ಬರೆಯುವ ಕೌಶಲ್ಯವನ್ನು ಬೆಳೆಸಿಕೊಂಡಿದ್ದಾರೆ.

## ಕಾನೂನು ನೆರವು

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆರಂಭಿಕ ಹಂತದಲ್ಲೇ ಭಾವನಾತ್ಮಕ ಬೆಂಬಲ, ಕಾನೂನು ಸಲಹೆ ಮತ್ತು ನೆರವು ಒದಗಿಸಲು ಆರು ಜಿಲ್ಲೆಗಳಲ್ಲೂ ಡೀಡ್ಸ್‌ನಿಂದ ಯುವ ಮಹಿಳಾ ವಕೀಲರನ್ನು ನೇಮಿಸಲಾಗಿ, ಅಂಯಾಂಯ ಜಿಲ್ಲೆಗಳಲ್ಲಿ ಮಹಿಳಾಪರ–ಲಿಂಗಸಂವೇದನಾಶೀಲರಾಗಿ ಕಾರ್ಯವಹಿಸುತ್ತಿದ್ದಾರೆ. 6 ಜಿಲ್ಲೆಗಳಲ್ಲಿ 27 ಲೀಗಲ್ ಕ್ಲಿನಿಕ್ ಮೂಲಕ ಸುಮಾರು 450ಕ್ಕಿಂತ ಅಧಿಕ ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರಿಗೆ ಕಾನೂನು ಅರಿವು ಮೂಡಿಸಿದ್ದಾರೆ. ಹಿಂಸೆಗೊಳಗಾದ ಮಹಿಳೆಯರಿಗೆ ಭಾವಾನಾತ್ಮಕ ಬೆಂಬಲ, ಮಹಿಳಾ ಹಕ್ಕುಗಳು ಕಾನೂನು ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

## ಮುಖ್ಯ ತರಬೇತುದಾರರ ತರಬೇತಿ

ಕಾರ್ಯಕ್ಷೇತ್ರದ ಜಿಲ್ಲೆಗಳಲ್ಲಿ ಪೂರಕ ಕಾನೂನು ಸುಗಮಕಾರರನ್ನು ತರಬೇತುಗೊಳಿಸಲು ಪ್ರತೀ ಜಿಲ್ಲೆಯಿಂದ ಆಯ್ಕೆಯಾದ ಸಂಪನ್ಮೂಲ ವ್ಯಕ್ತಿಗಳನ್ನು ತಯಾರುಗೊಳಿಸುವ ಉದ್ದೇಶದಿಂದ 3ನೇ ಹಂತದ ಮಹಿಳಾ ಪ್ರಕರಣಗಳ ನಿರ್ವಹಣೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ತರಬೇತಿಗೆ ವಿಷಯ ಮಂಡನೆಗೆ ಸಂಬಂಧಿಸಿದ 12 ಗೂಗಲ್ ಸಭೆಗಳು ನಡೆದಿರುತ್ತದೆ.

ಆರು ಜಿಲ್ಲೆಯ 15 ಮುಖ್ಯ ತರಬೇತಿದಾರರು, ಪ್ರಥಮ ಮಾಹಿತಿ ವರದಿ, ಮಹಿಳಾ ಪ್ರಕರಣಗಳ ನಿರ್ವಹಣೆ, ದೂರು ಅರ್ಜಿ ಬರವಣಿಗೆ, ಕೌಟುಂಬಿಕ ಘಟನಾ ವರದಿ, ದಾಖಲೆಗಳ ಮಹತ್ವ ಮಾಹಿತಿಯನ್ನು ಚಟುವಟಿಕೆ ಆಧಾರಿತವಾಗಿ ಸುಗಮಕಾರರಿಗೆ ನೀಡಲು ಅವರನ್ನು ಸಶಕ್ತಗೊಳಿಸಲು 2025 ಜನವರಿ ತಿಂಗಳ 17 ಮತ್ತು 18ರಂದು ಬಾಗಲಕೋಟೆಯ ಜಿಲ್ಲಾ ಪಂಚಾಯತ್ ಸಂಪನ್ಮೂಲ ಕೇಂದ್ರದಲ್ಲಿ ತರಬೇತಿ ನಡೆಯಿತು. ತರಬೇತಿಯಿಂದ ಸುಗಮಕಾರರು ತರಬೇತಿ ಮಾಡಲು ಅರ್ಹರಾಗಿದ್ದಾರೆ.

## ಜೆಂಡರ್ ಚಾಂಪಿಯನ್ಸ್ ಕಾರ್ಯಕ್ರಮ

2023ರಲ್ಲಿ ಸಂಸ್ಥೆಯು ಹದಿಹರೆಯದ ಮಕ್ಕಳಿಗಾಗಿ ಜೆಂಡರ್ ಚಾಂಪಿಯನ್ ಯೋಜನೆಯನ್ನು ರೂಪಿಸಿದೆ. ಜೆಂಡರ್ ಚಾಂಪಿಯನ್ ಎಂದರೆ, ಭಾರತೀಯ ಸಂವಿಧಾನದ 'ಸಮಾನತೆ'ಯ ಆಶಯಕ್ಕೆ ಪೂರಕವಾಗಿ ಹದಿಹರೆಯದ ಹುಡುಗರು ಮತ್ತು ಹುಡುಗಿಯರನ್ನು ಲಿಂಗ ಸೂಕ್ಷ್ಮಗೊಳಿಸುವುದು ಹಾಗೂ ಅವರ ಹಕ್ಕುಗಳನ್ನು ಗೌರವಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡುವಂತಹ ಜವಾಬ್ದಾರಿಯುತ ಲಿಂಗ ಸಂವೇದನಾಶೀಲ ನಾಯಕರನ್ನಾಗಿ ರೂಪಿಸುವುದು. 2024ರ ಜೂನ್ ತಿಂಗಳಿನಿಂದ ಮಂಗಳೂರು, ಮುಲ್ಕಿ, ಉಳ್ಳಾಲ ತಾಲೂಕಿನ ಆಯ್ದ 14 ಸರಕಾರಿ ಪ್ರೌಢ ಶಾಲೆಗಳಲ್ಲಿ ಈ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ದಕ್ಷಿಣ ಕನ್ನಡದ ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ 8ನೇ ತರಗತಿಯ ಹುಡುಗಿಯರು, ಹುಡುಗರಿಗೆ ಒಟ್ಟಾಗಿ ಈ ತರಬೇತಿ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ನಾಯಕತ್ವ, ಸಂವಹನ, ಹೆಣ್ಣು– ಗಂಡು ಸಮಾನತೆ, ಹದಿಹರೆಯದ ಬೆಳವಣಿಗೆಗಳು, ಹಿಂಸೆ, ಪೋಕ್ಸೋ, ಕೆರಿಯರ್ ಗೈಡೆನ್ಸ್ ವಿಷಯಗಳ ಮೇಲೆ ಅರಿವು ಮೂಡಿಸಲಾಗಿದೆ. ಪೋಲಿಸ್ ಠಾಣೆ, ಸಖಿ ಕೇಂದ್ರ, ನ್ಯಾಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಕ್ಷೇತ್ರ ವೀಕ್ಷಣೆಗೆ ಕರೆದೊಯ್ದು ಅಲ್ಲಿಯ ಕಾರ್ಯವೈಖರಿಯನ್ನು ಪರಿಚಯಿಸಲಾಗಿದೆ. 15 ದಿನಗಳಿಗೊಮ್ಮೆ ಪ್ರತಿ ಶನಿವಾರ 2 ಗಂಟೆಯ ಅವಧಿಯಲ್ಲಿ ಚಟುವಟಿಕೆಯಾಧಾರಿತವಾಗಿ ತರಬೇತಿಗಳನ್ನು ಸುಮಾರು 463 ವಿದ್ಯಾರ್ಥಿಗಳಿಗೆ ನಡೆಸಲಾಗಿದೆ. ಮಕ್ಕಳಿಗೆ ಶಾಲೆಗಳಲ್ಲಿ ಈ ಕಾರ್ಯಕ್ರಮಗಳಿಂದ ಪ್ರಯೋಜನವಾಗಿದೆಯೆಂದು ಮಕ್ಕಳು, ಪೋಷಕರು, ಟೀಚರ್ಸ್ ಅಭಿಪ್ರಾಯ ಪಟ್ಟಿದ್ದಾರೆ.

**'ಜೆಂಡರ್ ಚಾಂಪಿಯನ್ಸ್ 'ಮಕ್ಕಳ ಸಮಾವೇಶ :** ನಗರದ ಮಿನಿ ಪುರಭವನದಲ್ಲಿ ಡೀಡ್ಸ್ ಮಂಗಳೂರು, ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆಶ್ರಯದಲ್ಲಿ ಆಯೋಜಿಸಲಾದ 'ಜೆಂಡರ್ ಚಾಂಪಿಯನ್ಸ್ 'ಮಕ್ಕಳ ಸಮಾವೇಶ' ಫೆಬ್ರವರಿ 1, 2025ರಂದು ನಡೆಯಿತು.




ಗಂಡು ಮಕ್ಕಳನ್ನು ಓದಿಸುವುದಕ್ಕೂ ಹೆಣ್ಣುಮಕ್ಕಳನ್ನು ಓದಿಸುವುದಕ್ಕೂ ವ್ಯತ್ಯಾಸವಿದೆ. ಗಂಡುಮಗುವನ್ನು ಓದಿಸಿದರೆ ಅದು ಒಂದು ಕುಟುಂಬಕ್ಕಷ್ಟೇ ಸೀಮಿತವಾಗುತ್ತದೆ. ಹೆಣ್ಣು ಮಗುವನ್ನು ಓದಿಸಿದರೆ ಅದರ ಪರಿಣಾಮ ಇಡೀ ಸಮಾಜದ ಮೇಲೆ ಬೀರುತ್ತದೆ. ಅತ್ಯಂತ ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಕಂಡ ಸಿಂಗಾಪುರ್‌ನಲ್ಲಿ ಅದರ ನಿರ್ಮಾತೃ ಮಾಡಿದ ಬಹಳ ದೊಡ್ಡ ಬದಲಾವಣೆಯೆಂದರೆ ಪ್ರತಿ ಮನೆಯ ಅಡುಗೆ ಕೋಣೆಯನ್ನು ಬಂದ್ ಮಾಡಿದ್ದು. ದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಸಂಖ್ಯೆಯಲ್ಲಿರುವ ಬುದ್ಧಿವಂತ ಮತ್ತು ಸಾಕಷ್ಟು ಪ್ರತಿಭಾನ್ವಿತ ಹೆಣ್ಣು ಮಕ್ಕಳನ್ನು ಅಡುಗೆ ಕೋಣೆಗೆ ಸೀಮಿತ ಮಾಡಿ ಅರ್ಧ ಪರ್‌ಸೆಂಟ್ ಪ್ರತಿಭಾ ಸಂಪನ್ಮೂಲಗಳನ್ನು ನಾವು ಮುಚ್ಚಿಟ್ಟಾ ಇದ್ದೇವೆ. ಆದ್ದರಿಂದ ಮನೆ ಮನೆಯ ಕಿಚನ್ ಬಂದ್ ಮಾಡಿ ಕಮ್ಯುನಿಟಿ ಕಿಚನ್ ಶುರು ಮಾಡಬೇಕು. ಅಡುಗೆ ಕೆಲಸದಲ್ಲಿ ದಿನ ಪೂರ್ತಿ ನಮ್ಮ ಹೆಣ್ಣು ಮಕ್ಕಳು ಕಳೆದು ಹೋಗದೆ, ಅವರು ಹೊರಗೆ ಬಂದು, ಎಲ್ಲಾ ರೀತಿಯ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಹಾಗಾಗಬೇಕು. ಹೆಣ್ಣುಮಕ್ಕಳು ಮನೆಯಿಂದ ಹೊರಬಂದು ಕ್ರಿಯಾಶೀಲವಾದರೆ ಅದರ ಸಕಾರಾತ್ಮಕ ಪರಿಣಾಮ ಸಮಾಜದ ಮೇಲೆ ಬೀರುತ್ತದೆ ಎಂದು ದ.ಕ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ 'ಜೆಂಡರ್ ಚಾಂಪಿಯನ್ಸ್ 'ಮಕ್ಕಳ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಡೀಡ್ಸ್ ಸಂಸ್ಥೆಯ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್ ಜೆಂಡರ್ ಚಾಂಪಿಯನ್ಸ್ ತರಬೇತಿಯ ಮಾಹಿತಿಯನ್ನು ನೀಡಿದರು.

ತರಬೇತಿಯ ಫಲಾನುಭವಿ, ಮುಲ್ಲಕಾಡು ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಗ್ರೀಷ್ಮಾ ತನ್ನ ಅನಿಸಿಕೆಯನ್ನು ಹಂಚಿಕೊಳ್ಳುತ್ತಾ "ನಮ್ಮ ಮನೆಯಲ್ಲಿ ನಾನೊಬ್ಬಳೇ ಮನೆ ಕೆಲಸ ಮಾಡ್ತಿದ್ದೆ. ತಮ್ಮ ಆಟ ಆಡಿಕೊಂಡು ಇರ್ತಿದ್ದ. ಡೀಡ್ಸ್ ಸಂಸ್ಥೆಯವರು ನಮ್ಮ ಶಾಲೆಗೆ ಬಂದು ಲಿಂಗ ತಾರತಮ್ಯದ ಬಗ್ಗೆ ಹೇಳಿ ಕೊಟ್ಟದ್ದನ್ನು ಮನೆಯಲ್ಲಿ ತಿಳಿಸಿದೆ. ಈಗ ತಮ್ಮನೂ ಗುಡಿಸುವ, ನೆಲ ಒರೆಸುವ ಕೆಲಸ ಮಾಡ್ತಾನೆ. ಅಮ್ಮನಿಗೆ ಮನೆ ಕೆಲಸದಲ್ಲಿ ಏನೂ ಸಹಾಯ ಮಾಡದಿದ್ದ ಅಪ್ಪ ಕೂಡಾ ಈಗ ಮನೆ ಕೆಲಸದಲ್ಲಿ ನೆರವಾಗುತ್ತಾರೆ. ತರಬೇತಿಯ ಭಾಗವಾಗಿ ನ್ಯಾಯಾಲಯ ಭೇಟಿ ಇತ್ತು. ಅಲ್ಲಿ ನ್ಯಾಯಾಧೀಶರನ್ನು ನೋಡಿದ ಮೇಲೆ ನಾನೂ ಓದಿ ನ್ಯಾಯಾಧೀಶೆ ಯಾಗುತ್ತೇನೆ ಎಂದು ನಿರ್ಧರಿಸಿದ್ದೇನೆ. ಕಷ್ಟದಲ್ಲಿರುವ ಮಹಿಳೆಯರಿಗೆ ನ್ಯಾಯ ಕೊಡಿಸಲು ಪ್ರಯತ್ನಿಸುತ್ತೇನೆ" ಎಂದರು.

ಕಾರ್ನಾಡು ಮುಲ್ಕಿ ಸದಾಶಿವ ನಗರದ ಸರಕಾರಿ ಹೈಸ್ಕೂಲಿನ ವಿದ್ಯಾರ್ಥಿನಿ ವೈಷ್ಣವಿ "ನನಗೆ ಮನೆಯಲ್ಲಿ ಆಹಾರದಲ್ಲಿ ತಾರತಮ್ಯ ಮಾಡುತ್ತಿದ್ದರು. ನನ್ನನ್ನು ಬೇಗ ಮದುವೆ ಮಾಡಲು ಮನೆಯವರು ಯೋಚಿಸಿದ್ದರು. ತರಬೇತಿಯ ಬಳಿಕ ನಾನು ಮುಂದಕ್ಕೆ ಓದುವ ನನ್ನ ನಿರ್ಧಾರವನ್ನು ಮನೆಯವರಲ್ಲಿ ಹೇಳಿಕೊಂಡಾಗ ಅವರು ಒಪ್ಪಿಕೊಂಡು ನೀನೆಷ್ಟು ಓದುವಿಯೋ ಅಷ್ಟು ಓದಿಸುತ್ತೇವೆ ಅಂದರು" ಎಂಬುದಾಗಿ ಹೇಳಿಕೊಂಡರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಉಸ್ಮಾನ್ ಎ, ಕ್ಷೇತ್ರ ಶಿಕ್ಷಣಾಧಿಕಾರಿ ಈಶ್ವರ್, ರಂಗಕರ್ಮಿ ಮೋಹನ ಚಂದ್ರ, ಪಡಿ ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿ ರೆನ್ನಿ ಡಿಸೋಜ ಉಪಸ್ಥಿತರಿದ್ದರು. ತರಬೇತಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಮತ್ತು ಶಾಲೆಗಳಿಗೆ ಪ್ರಮಾಣ ಪತ್ರ ವಿತರಿಸಲಾಯ್ತು.

### ಭಾವಪೂರ್ಣ ಶ್ರದ್ಧಾಂಜಲಿ



ಫ್ರಾನ್ಸಿಸ್ ಕೊಲಾಸೊ
ನಿಧನ : 28-11-2024

ಡೀಡ್ಸ್ ಸಂಸ್ಥೆಯ ಆಡಳಿತ ಮಂಡಳಿಯ ಸಕ್ರಿಯ ಸದಸ್ಯರಾಗಿದ್ದು ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸಿದ ಫ್ರಾನ್ಸಿಸ್ ಕೊಲಾಸೊರವರು ನಮ್ಮನ್ನು ಅಗಲಿದ್ದಾರೆ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ.

ಮಂಗಳೂರಿನ ರೋಶನಿ ನಿಲಯದ ಕಾಲೇಜ್‌ನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿದ್ದ ಇವರು ನಿವೃತ್ತಿ ಹೊಂದಿ ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

ಮುದ್ರಣ : ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A NEWS LETTER BY DEEDS, MANGALORE

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್)
ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. - 575 002. ದೂರವಾಣಿ : 0824-2217022, 4281037
E-mail : deeds82@rediffmail.com Website : www.deedsmangaluru.in